**ಕರ್ನಾಟಕ ವಿಧಾನ ಪರಿಷತ್ತು**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 824(947)

ಸದಸ್ಯರ ಹೆಸರು : ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ)

ಉತ್ತರಿಸುವ ದಿನಾಂಕ : 15.12.2025.

ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಅನುದಾನಿತ ಪ್ರೌಢಶಾಲಾ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ನಿವೃತ್ತಿ, ಮರಣ, ರಾಜೀನಾಮೆಯಿಂದ ಜನವರಿ 2016 ರಿಂದ ಮಾರ್ಚ್ 2024 ರವರೆಗೆ ಖಾಲಿ ಆಗಿರುವ ಒಟ್ಟು ಹುದ್ದೆಗಳೆಷ್ಟು; (ವಿವರ ನೀಡುವುದು) | **ಅನುದಾನಿತ ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ**<br>ರಾಜ್ಯದ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ದಿನಾಂಕ:01.01.2016 ರಿಂದ 31.07.2025 ರವರೆಗೆ ಒಟ್ಟು 10793 ಖಾಲಿ ಹುದ್ದೆಗಳು ಇರುತ್ತದೆ.<br>**ಅನುದಾನಿತ ಪದವಿಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ**<br>ರಾಜ್ಯದ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಜನವರಿ 2016 ರಿಂದ ಮಾರ್ಚ್ 2024 ರವರೆಗೆ ಒಟ್ಟು 2030 ಬೋಧಕ ಹುದ್ದೆಗಳು ಖಾಲಿ ಇರುತ್ತದೆ. |
| ಆ) | ಸದರಿ ಖಾಲಿ ಹುದ್ದೆಗಳನ್ನು ತುಂಬಲು ಯಾವ ಕಾಲಮಿತಿಯಲ್ಲಿ ಅನುಮತಿ ನೀಡಲಾಗುತ್ತದೆ; | **ಅನುದಾನಿತ ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ**<br>ರಾಜ್ಯದ ಅನುದಾನಿತ ಪ್ರೌಢಶಾಲೆಗಳಲ್ಲಿ ದಿನಾಂಕ:01.01.2016 ರಿಂದ 31.12.2020 ರವರೆಗೆ ನಿಧನ, ನಿವೃತ್ತಿ, ರಾಜೀನಾಮೆ ಹಾಗೂ ಇತರೆ ಕಾರಣಗಳಿಂದ ಖಾಲಿಯಾದ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಆದೇಶ ಸಂಖ್ಯೆ:ಇಪಿ 396 ಎಸ್ ಇಎಸ್ 2021, ದಿನಾಂಕ:07.08.2024 ರಲ್ಲಿ ಅನುಮತಿ ನೀಡಲಾಗಿದೆ.<br>ಸದರಿ ಖಾಲಿ ಹುದ್ದೆಗಳ ಭರ್ತಿಯನ್ನು ತಂತ್ರಾಂಶದಲ್ಲಿ ಮಾಡಲು ಸೂಚಿಸಲಾಗಿರುತ್ತದೆ. ಅದರಂತೆ ಈಗಾಗಲೇ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ಮೊದಲನೇ ಹಂತದಲ್ಲಿ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಶಾಲೆಯಲ್ಲಿ ಖಾಲಿ ಇರುವ ಮಾಹಿತಿಯನ್ನು ತಂತ್ರಾಂಶದಲ್ಲಿ ಭರ್ತಿ ಮಾಡಿಸಲಾಗಿರುತ್ತದೆ. ಎರಡನೇ ಹಂತದಲ್ಲಿ ಆಡಳಿತ ಮಂಡಳಿಗಳಿಂದ ಖಾಲಿ ಹುದ್ದೆಗಳನ್ನು ರೋಸ್ಟರ್‌ನಂತೆ ಭರ್ತಿ ಮಾಡಿಕೊಳ್ಳಲು ಆಡಳಿತ ಮಂಡಳಿ ಠರಾವಿನೊಂದಿಗೆ |

<table>
<tr>
<td></td>
<td></td>
<td>ಸಲ್ಲಿಸಲು ಪ್ರಸ್ತುತ ತಂತ್ರಾಂಶವನ್ನು ಲೈವ್ ಮಾಡಲಾಗಿದೆ.<br><br>ಆಡಳಿತ ಮಂಡಳಿಗಳಿಂದ ನಿಯಮಗಳನ್ವಯ ಪ್ರಸ್ತಾವನೆ ಸ್ವೀಕೃತವಾದ ನಂತರ ತ್ವರಿತವಾಗಿ ನಿಯಮಾನುಸಾರ ಹುದ್ದೆ ಭರ್ತಿ ಮಾಡಲು ಕ್ರಮ ವಹಿಸಲಾಗುವುದು.<br><br>ಅನುದಾನಿತ ಪದವಿಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ<br><br>ರಾಜ್ಯದ ಅನುದಾನಿತ ಪದವಿಪೂರ್ವ ಕಾಲೇಜುಗಳಲ್ಲಿ ದಿನಾಂಕ:01.01.2016 ರಿಂದ 31.12.2020 ರವರೆಗೆ ನಿಧನ, ನಿವೃತ್ತಿ, ರಾಜೀನಾಮೆ ಹಾಗೂ ಇತರೆ ಕಾರಣಗಳಿಂದ ಖಾಲಿಯಾದ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಆದೇಶ ಸಂಖ್ಯೆ:ಇಪಿ 396 ಎಸ್ ಇಎಸ್ 2021, ದಿನಾಂಕ:07.08.2024 ರಲ್ಲಿ ನೀಡಿರುವ ಅನುಮತಿಯಂತೆ ಹೊಸದಾಗಿ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದ್ದು, ಖಾಲಿ ಹುದ್ದೆಗಳ ಮಾಹಿತಿಗಳನ್ನು ಇಂದೀಕರಿಸಲು ಕಾಲಾವಕಾಶವನ್ನು ಕಾಲೇಜುಗಳಿಗೆ ನೀಡಲಾಗಿದೆ. ಹುದ್ದೆಗಳ ಭರ್ತಿಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಬೇಕಾಗಿದ್ದು, ಸದರಿ ಅರ್ಜಿಯನ್ನು ಸಹ ತಂತ್ರಾಂಶದಲ್ಲಿ ಇಂದೀಕರಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.</td>
</tr>
<tr>
<td>ಇ)</td>
<td>2015ಕ್ಕೂ ಮುನ್ನ ಅನುದಾನಿತ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ ಈಗಾಗಲೇ ಅನುಮತಿ ನೀಡಿ ವೇತನಾನುದಾನಕ್ಕೊಳಪಟ್ಟಿರುವ ಹುದ್ದೆಗಳೆಷ್ಟು; ಇಲಾಖಾ ಅನುಮತಿ ನೀಡಿ ಇದುವರೆವಿಗೆ ವೇತನಾನುದಾನಕ್ಕೆ ಒಳಪಡಿಸದೆ ಇರುವ ಹುದ್ದೆಗಳೆಷ್ಟು;</td>
<td>ಅನುದಾನಿತ ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ<br><br>
<table>
<tr><th>ಸರ್ಕಾರ ದಿಂದ ಅನುಮತಿ ನೀಡಿರುವುದು</th><th>ಆಡಳಿತ ಮಂಡಳಿಯಿಂದ ಸಲ್ಲಿಕೆಯಾಗಿರುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ವೇತನಾನುದಾನಕ್ಕೆ ಒಳಪಡಿಸಿರುವ ಹುದ್ದೆಗಳು</th><th>ಆಡಳಿತ ಮಂಡಳಿಗಳಿಂದ ಸಲ್ಲಿಕೆಯಾಗ ಬೇಕಿರುವುದು (ವೇತಾನಾನುದಾನಕ್ಕೆ ಒಳಪಡಿಸದೇ ಇರುವ ಹುದ್ದೆಗಳು)</th></tr>
<tr><td>3633</td><td>2556</td><td>1077</td></tr>
</table>
</td>
</tr>
</table>

| | | |
|---|---|---|
| | | **ಅನುದಾನಿತ ಪದವಿಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ**<br><br>\| **2015ರ ಮುನ್ನ ಸರ್ಕಾರವು ಭರ್ತಿ ಮಾಡಲು ಅವಕಾಶ ನೀಡಿರುವ ಹುದ್ದೆಗಳ ಸಂಖ್ಯೆ** \| **ಮೇಲಿನಂತೆ ಈಗಾಗಲೇ ವೇತನಾನುದಾನಕ್ಕೆ ಒಳಪಡಿಸಿದ ಹುದ್ದೆಗಳ ಸಂಖ್ಯೆ:** \| **ಇಲಾಖಾ ಅನುಮತಿ ನೀಡಿದ ನಂತರ, ಆಡಳಿತ ಮಂಡಳಿಯವರು ಕಾರ್ಯಭಾರ ಕೊರತೆ, ದಾಖಲಾತಿ ಕೊರತೆ ಹಾಗೂ ಇನ್ನಿತರೆ ಕಾರಣದಿಂದ ವೇತನಾನುದಾನಕ್ಕೆ ಒಳಪಡಿಸಲು ಪ್ರಸ್ತಾವನೆಗಳನ್ನು ಸಲ್ಲಿಸದೆ ಇರುವ ಹುದ್ದೆಗಳ ಸಂಖ್ಯೆ :** \| **ಆಡಳಿತ ಮಂಡಳಿಗಳಿಂದ ಹುದ್ದೆ ಭರ್ತಿಗಾಗಿ ಪ್ರಸ್ತಾವನೆ ಸಲ್ಲಿಸದಿರುವ ಹುದ್ದೆಗಳ ಸಂಖ್ಯೆ** \|<br>\| 1033 \| 468 \| 107 \| 458 \| |
| ಈ) | ಡಿಸೆಂಬರ್ 2015 ರವರಗೆ ನಿವೃತ್ತಿ, ಮರಣ, ರಾಜೀನಾಮೆಯಿಂದ ತೆರವಾಗಿರುವ ಎಲ್ಲಾ ಹುದ್ದೆಗಳನ್ನು ತುಂಬಲು ಅನುಮತಿ ನೀಡಲಾಗುವುದು ಯಾವಾಗ? | **ಅನುದಾನಿತ ಪ್ರೌಢಶಾಲೆಗಳಿಗೆ ಮತ್ತು ಪದವಿಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ**<br>ದಿನಾಂಕ:31-12-2015ರವರೆಗೆ ನಿಧನ, ನಿವೃತ್ತಿ, ರಾಜಿನಾಮೆ ಹಾಗೂ ಇತ್ಯಾದಿ ಕಾರಣಗಳಿಂದ ತೆರವಾಗಿರುವ ಬೋಧಕ ಹುದ್ದೆಗಳ ಭರ್ತಿ ಸಂಬಂಧ ಚಾಲ್ತಿಯಲ್ಲಿರುವ ನಿಯಮಗಳನ್ನು ಪೂರೈಸುವ ಆಡಳಿತ ಮಂಡಳಿಗಳು ಅಗತ್ಯ ದಾಖಲೆಗಳನ್ನು ಸಲ್ಲಿಸಿರುವ ಪ್ರಸ್ತಾವನೆಗಳಿಗೆ ನಿಯಮಾನುಸಾರ ಅನುಮತಿ ನೀಡಲಾಗುತ್ತಿದೆ. |

ಸಂಖ್ಯೆ: ಇಪಿ 365 ಎಸ್‌ಇಎಸ್ 2025

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು